## ವಾರ್ತಾ ವಿಶ್ಲೇಷಣೆ

**ವಾಸ್ತವ ಮತ್ತು ಆದರ್ಶ: ವಿಜಯ ಕರ್ನಾಟಕ** ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಕೆ.ವಿ. ತಿರುಮಲೇಶ್ ಅವರ ಲೇಖನದ ಹೆಸರು ಇದು. ಈ ಲೇಖನದಲ್ಲಿ ವಾಸ್ತವಿಕತೆ ಮತ್ತು ಆದರ್ಶ ವಾದದ ನಡುವಣ ಕಂದಕದ ಕರಾಳ ಮುಖಗಳನ್ನು ಲೇಖಕರು ನಮ್ಮ ಮುಂದೆ ತೆರೆದಿಡುತ್ತಾರೆ. ಪ್ರಸಿದ್ಧ ಚಿಂತಕ ಎರಿಕ್ ಎರಿಕ್ಸನ್ ಲೋಕವನ್ನೇ ಪ್ರೀತಿಸುತ್ತಿದ್ದ ಮಹಾತ್ಮ ಗಾಂಧಿ ಯಾರನ್ನೂ ಪ್ರೀತಿಸಲಿಲ್ಲ ಎನ್ನುತ್ತಾನಂತೆ. ಎಲ್ಲರನ್ನೂ ಪ್ರೀತಿಸುವುದು ಆದರ್ಶ. ಅದರ ಗುಂಗಿನಲ್ಲಿರುವ ವ್ಯಕ್ತಿಯು ಯಾರನ್ನೂ ಪ್ರೀತಿಸಲು ಸಾಧ್ಯವಿಲ್ಲ ಎಂಬ ವಾದ ಅವನದು. ಕೆಲವು ನಿಯಮಗಳನ್ನು ಪಾಲಿಸಲೇಬೇಕೆಂದು ಒತ್ತಾಯ ಹೇರುವ ಧರ್ಮ, ನೀತಿ ಮತ್ತು ರಾಜನೀತಿಗಳಲ್ಲಿ ಕಾಣಬರುವುದು ಇದೇ. ರಾಮನು ತನ್ನ ಆದರ್ಶವನ್ನು ಚಾಚೂ ತಪ್ಪದೆ ಪಾಲಿಸಲು ಹೋಗಿ, ಸೀತೆಯನ್ನು ಎಷ್ಟು ದುಃಖಕ್ಕೀಡುಮಾಡಿದ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಈ ನಿಟ್ಟಿನಲ್ಲಿ ನೈತಿಕತೆಯ ಬಗ್ಗೆ ಜರ್ಮನಿಯ ಪ್ರಸಿದ್ಧ ತತ್ತ್ವಶಾಸ್ತ್ರಜ್ಞ ಇಮ್ಯಾನುಯಲ್ ಕ್ಯಾಂಟ್ ಹೇಳುವ ಈ ಮಾತು ಅರ್ಥಗರ್ಭಿತವಾಗಿದೆ: "ಇರುವುದು ಒಂದೇ ಪ್ರಮೇಯ (ಅಥವಾ ನಿಯಮ). ಮನುಷ್ಯ ಹೇಗೆ ವರ್ತಿಸಬೇಕೆಂದರೆ, ಅದೇ ಸಮಯದಲ್ಲಿ ಅದು ಸಾರ್ವತ್ರಿಕ ನ್ಯಾಯವೂ ಆಗುವಂತೆ ವರ್ತಿಸಬೇಕು." ಕ್ರೈಸ್ತನೂ ಅದನ್ನೇ ಹೇಳುತ್ತಾನೆ, "ನಿನ್ನ ನೆರೆಯವನು ನಿನಗೆ ಏನು ಮಾಡಬೇಕೆಂದು ನೀನು ಬಯಸುತ್ತೀಯೋ, ಅದನ್ನೇ ಅವನಿಗೂ ಮಾಡು." ಇಲ್ಲಿ ಸರ್ವಸಾಮಾನ್ಯವಾದ ನ್ಯಾಯದ ಪರಿಕಲ್ಪನೆ ಇದೆ. ಅದಕ್ಕನುಗುಣವಾಗಿ ಎಲ್ಲರೂ ನಡೆದುಕೊಳ್ಳಬೇಕು ಎಂಬ ಕಳಕಳಿ ಇದೆ.

ಆದರೂ ಈ ಆದರ್ಶದ ಪರಿಪಾಲನೆ ಸಾಧ್ಯವಾಗದೆ ಇರುವುದಕ್ಕೆ ಕಾರಣವೇನು? ಮನುಷ್ಯನ ಇಬ್ಬಂದಿತನ. ಮನುಷ್ಯನಿಗೆ ಬದುಕುವುದಕ್ಕೆ ಎರಡೂ ಬೇಕು. ವಾಸ್ತವಿಕತೆಯ ಸ್ವಾರ್ಥ ಮನೋಭಾವ ಇರುವಿಕೆಗೆ ಅಗತ್ಯ. ಅದರಂತೆಯೇ, ಈಗ ಇರುವ ಬಾಳಿಗೆ ಬೆಲೆ ಅಥವಾ ಮೌಲ್ಯ ಬರಬೇಕಾದರೆ, ಆದರ್ಶದ ಪರಿಕಲ್ಪನೆ ಬೇಕೇ ಬೇಕು. ಪ್ರಾಮಾಣಿಕ ವ್ಯಕ್ತಿ ಇವೆರಡನ್ನೂ ತನ್ನ ಜೀವನದಲ್ಲಿ ಹೊಂದಿಸಿಕೊಳ್ಳುವುದಕ್ಕೆ ಹೆಣಗುತ್ತಾನೆ. ಆದರೆ ಬಹು ಮಂದಿ, ಆದರ್ಶವನ್ನು ಅಪ್ರಾಯೋಗಿಕ ಎಂದು ಕೈಬಿಟ್ಟು, ಸ್ವಾರ್ಥವನ್ನೇ ಆರಿಸಿಕೊಳ್ಳುತ್ತಾರೆ. ಸ್ವಾರ್ಥವನ್ನು 'ಮಿತಿ' ಎಂಬ ಅರ್ಥದಲ್ಲಿ ಇಲ್ಲಿ ತೆಗೆದುಕೊಳ್ಳಬೇಕು. ಆದರ್ಶವನ್ನು ಅನುಷ್ಠಾನಕ್ಕೆ ತರುವಲ್ಲಿ, ಈ ಮಿತಿಗಳೇ ಅಡೆತಡೆಗಳು.

ವ್ಯಕ್ತಿಯಿಂದ ಸಮಷ್ಟಿಯತ್ತ ಸಾಗುವ ಚಲನೆಯನ್ನೇ ನಾವು 'ಸಮಾಜ' ಎಂದು ಕರೆಯುವುದು. ವ್ಯಕ್ತಿಯೊಬ್ಬ ತನ್ನ ಸ್ವಂತ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದರ ಜೊತೆಗೆ, ಸಾಮಾಜಿಕ ಬದ್ಧತೆಯನ್ನೂ ಲಕ್ಷಿಸಬೇಕಾಗುತ್ತದೆ. ಇಲ್ಲಿ, ಸ್ವಾರ್ಥವನ್ನು ಕಳೆದುಕೊಳ್ಳುವುದೇ ಸಮಷ್ಟಿಯಾಗುತ್ತದೆ. ಇದೇ ಆದರ್ಶ.

ಶ್ರೀ ತಿರುಮಲೇಶ್ ತಮ್ಮ ಲೇಖನವನ್ನು ಕೆಳಗಿನ ಸೊಗಸಾದ ಮಾತುಗಳಿಂದ ಮುಗಿಸುತ್ತಾರೆ: "ಕೇವಲ ಸ್ವಾರ್ಥಪರನಾದ ವ್ಯಕ್ತಿ ಸಮಷ್ಟಿಯನ್ನು ಕಳೆದುಕೊಳ್ಳುತ್ತಾನೆ. ಸಮಷ್ಟಿಯಲ್ಲಿ ನಂಬಿಕೆಯಿರುವ ವ್ಯಕ್ತಿ ಪ್ರಾಯಶಃ ತನ್ನತನವನ್ನೂ ಅದರ ಆಶ್ರಯದಲ್ಲಿ ಬೆಳೆಸಿಕೊಳ್ಳುವ ಸಾಧ್ಯತೆಯಿದೆ."

ಹೀಗೆ ಆದರ್ಶವನ್ನು ಆರಾಧಿಸುತ್ತ ನಡೆಸುವ ಜೀವನದಲ್ಲಿ, ಕರಾಳ ವಾಸ್ತವಿಕತೆಯನ್ನು ಮೀರಿಹೋಗುವ ಸಾಧ್ಯತೆ ಇದೆ. ಅದಿಲ್ಲದ ಜೀವನದಲ್ಲಿ, ನಮಗೆ ಉಳಿಯುವುದು ದುಃಖದುಮ್ಮಾನಗಳಿಂದ ಕೂಡಿದ ಕರಾಳ ವಾಸ್ತವವೊಂದೆ. ಆದರ್ಶವನ್ನು ವಾಸ್ತವಿಕವನ್ನಾಗಿಸುವುದಕ್ಕೆ ಹೆಣಗಾಡಿ, ತಕ್ಕಷ್ಟು ಸಫಲರಾದವರನ್ನೇ ಮಹಾಪುರುಷರೆನ್ನುತ್ತೇವೆ. ಅವರ ಜೀವನದಲ್ಲಿ ಕಾಣುವ ಕೆಲವು ವಿರೋಧಾಭಾಸಗಳ ನಡುವೆಯೂ, **ಶ್ರೀರಾಮ ಮತ್ತು ಮಹಾತ್ಮ ಗಾಂಧಿ** ಮೊದಲಾದವರು ನಮಗೆ ಪೂಜನೀಯರಾಗುವುದು ಇದೇ ಕಾರಣಕ್ಕಾಗಿ.

(**ವಿಜಯ ಕರ್ನಾಟಕ**, ಮಾರ್ಚ್ ೨೭, ೨೦೦೮)

**ಪ್ರಾಣಿಗಳ ಮನಸ್ಸು :** ೧೯೭೭ ನೇ ಇಸವಿಯಲ್ಲಿ, ಇರೆನ್ ಪೆಪ್ಪರ್ ಬರ್ಗ್ ಎಂಬ ವಿಜ್ಞಾನಿ ಒಂದು ಕ್ರಾಂತಿಕಾರಕ ಪ್ರಯೋಗವನ್ನು ಮಾಡಿದರು. ಒಂದು ವರ್ಷ ವಯಸ್ಸಿನ ಆಫ್ರಿಕನ್ ಗಿಣಿಗೆ ಇಂಗ್ಲಿಷ್ ಶಬ್ದಕೋಶವನ್ನು ಕಲಿಸಲು ಆಕೆ ಆರಂಭಿಸಿದರು. ಆ ಪಕ್ಷಿ ಇತ್ತೀಚೆಗೆ, ತನ್ನ ೩೧ ನೆಯ ವಯಸ್ಸಿನಲ್ಲಿ ಮರಣಹೊಂದಿತು.

ವಿಜ್ಞಾನಿಗಳು ಪ್ರಾಣಿಗಳಿಗೆ ಮಾನಸಿಕ ಸಾಮರ್ಥ್ಯವಿಲ್ಲ ಎಂದೇ ಹೇಳುತ್ತಾರೆ. ಆದರೆ, ಸಾಕುಪ್ರಾಣಿಗಳು ತಮ್ಮ ಭಾವನೆಗಳನ್ನು ಕಣ್ಣಿನ ಮೂಲಕ, ಚಲನೆಯ ಮೂಲಕ ವ್ಯಕ್ತಪಡಿಸುವ ಸಂಗತಿ ಸಾಕುಪ್ರಾಣಿಗಳ ಒಡೆಯರೆಲ್ಲರಿಗೂ ಗೊತ್ತು. ಅವು ಬರಿ ಸಹಜ ಕ್ರಿಯೆಗಳೇ ಅಥವಾ ಮನಸ್ಸಿನಿಂದ ಪ್ರಚೋದಿಸಲ್ಪಟ್ಟು ಮಾಡುವ ಕ್ರಿಯೆಗಳೇ ಎನ್ನುವುದು ಇಂದಿಗೂ ರಹಸ್ಯವಾಗಿರುವ ವಿಷಯ.

ಮಾನಸಿಕ ಸಾಮರ್ಥ್ಯದ ದ್ಯೋತಕಗಳಾಗಿ ಮನುಷ್ಯನಲ್ಲಿ ಕೆಲವು ಕುಶಲತೆಗಳಿರುತ್ತವೆ. ಅವೆಂದರೆ, **ನೆನಪಿನ ಶಕ್ತಿ, ಭಾಷಾ ವ್ಯಾಕರಣ ಮತ್ತು ಚಿಹ್ನೆಗಳನ್ನು ಗ್ರಹಿಸುವ ಶಕ್ತಿ, ಸ್ವ–ಪ್ರಜ್ಞೆ, ಇತರರ ಉದ್ದೇಶಗಳನ್ನು ಅರಿಯುವ ಸಾಮರ್ಥ್ಯ ಮತ್ತು ಸೃಜನಾತ್ಮಕ ಶಕ್ತಿ**. ಈ ಸಾಮರ್ಥ್ಯಗಳು, ಇತರ ಪ್ರಾಣಿವರ್ಗಗಳಲ್ಲೂ ಅಲ್ಪಪ್ರಮಾಣದಲ್ಲಿಯಾದರೂ ಇರುವುದನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರಂತೆ. ಉದಾಹರಣೆಗೆ ಕುರಿಗಳು ಮುಖಗಳನ್ನು ಗುರುತಿಸಬಲ್ಲವು. ಚಿಂಪಾಂಜಿಗಳು ಗೆದ್ದಲುಗಳನ್ನು ತಿನ್ನಲು ಹುತ್ತವನ್ನು ಅಗೆಯುವುದಕ್ಕೆ ತರಹಾವರಿ ಸಾಧನಗಳನ್ನು ಉಪಯೋಗಿಸುತ್ತವೆ. ಅದಲ್ಲದೆ ಸಣ್ಣ ಸಣ್ಣ ಪ್ರಾಣಿಗಳನ್ನು ಕೊಲ್ಲಲು ತಮ್ಮದೇ ಆದ ಆಯುಧಗಳನ್ನು ಅವು ಕಂಡುಕೊಂಡಿವೆ. ಡಾಲ್ಫಿನ್‌ಗಳು ಮನುಷ್ಯರ ಕೆಲವು ದೈಹಿಕ ಕ್ರಿಯೆಗಳನ್ನು ಅನುಸರಿಸುತ್ತವೆ. ಹೀಗಾಗಿ ಗಿಣಿ ಇಂಗ್ಲಿಷ್ ಭಾಷೆ ಕಲಿಯುವುದರಲ್ಲಿ ಏನೂ ಆಶ್ಚರ್ಯವಿಲ್ಲ, ಬಿಡಿ.

**ಮನ ಏವ ಮನುಷ್ಯಾಣಾಮ್ ಕಾರಣಂ ಬಂಧಮೋಕ್ಷಯೋಃ** – ಮನುಷ್ಯರ ಸಂಸಾರಬಂಧನಕ್ಕೂ ಮುಕ್ತಿಗೂ ಮನಸ್ಸೇ ಕಾರಣ. ಇಂತಹ ಪ್ರಮುಖವಾದ ಸಾಧನವನ್ನು ಇಟ್ಟುಕೊಂಡಿದ್ದರೂ, ನಾವು ಪ್ರಾಣಿಗಳಂತೆ ಜೀವನ ಮಾಡುತ್ತೇವೆ. ಹೀಗಾಗಿ, ತಮ್ಮ ಸಹಜ ಪ್ರವೃತ್ತಿ ಮತ್ತು ಮಿತಿಗಳನ್ನು ಮೀರಲು ಪ್ರಯತ್ನಿಸುತ್ತಿರುವ ಪ್ರಾಣಿಗಳೇ ನಮಗಿಂತಲೂ ಮೇಲಲ್ಲವೇ? (**ನ್ಯಾಷನಲ್ ಜಿಯಾಗ್ರಾಫಿಕ್**, ಮಾರ್ಚ್ ೨೦೦೮)